FRNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| ಭಾಗ-III<br>Part-III | ಬೆಂಗಳೂರು, ಸೋಮವಾರ, ಅಕ್ಟೋಬರ್ ೧೪, ೨೦೧೯ (ಆಶ್ವಯುಜ ೨೨, ಶಕ ವರ್ಷ ೧೯೪೦)<br>Bengaluru, Monday, October 14, 2019 (Ashwayuja 22, Shaka Varsha 1940) | ನಂ. ೮೮೯<br>No. 889 |
|---|---|---|



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಗ್ರಾಅಪ 215 ಜಿಪಸ 2018(36), ಬೆಂಗಳೂರು, ದಿನಾಂಕ:14-10-2019

ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ 119 ಭೂದಾಮ 2017 ದಿನಾಂಕ:11-01-2018ರಲ್ಲಿ ಕೆಳಗಿನ ಕೋಷ್ಟಕದ ಕಾಲಂ ಸಂಖ್ಯೆ(5) ರಲ್ಲಿ ನಮೂದಿಸಿರುವ ಮಂಗಳೂರು ತಾಲ್ಲೂಕು ವ್ಯಾಪ್ತಿಯನ್ನು ಬದಲಾಯಿಸಿ ಕೋಷ್ಟಕದ ಕಾಲಂ ಸಂಖ್ಯೆ(2)ರ ಮೂಡುಬಿದಿರೆ ತಾಲ್ಲೂಕನ್ನು ರಚಿಸಿರುವುದರಿಂದ,

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 119 ಮತ್ತು 302(ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೋಷ್ಟಕದ ಕಾಲಂ (4) ರಲ್ಲಿ ನಮೂದಿಸಿರುವ ಗ್ರಾಮಗಳನ್ನು ಒಳಗೊಂಡಿರುವಂತಹ ಮೂಡುಬಿದಿರೆ ತಾಲ್ಲೂಕು ಪಂಚಾಯಿತಿಯನ್ನು 14-10-2019ರ ದಿನಾಂಕದಿಂದ ಜಾರಿಗೆ ಬರುವಂತೆ ಕಾಲಂ ಸಂಖ್ಯೆ(3)ರಲ್ಲಿ ನಮೂದಾಗಿರುವ ಕೇಂದ್ರ ಸ್ಥಾನವನ್ನು ಒಳಗೊಂಡಂತೆ ಈ ಮೂಲಕ ರಚಿಸಿ ಆದೇಶಿಸಿದೆ. ಕೋಷ್ಟಕದ ಕಾಲಂ(4) ರಲ್ಲಿ ನಮೂದಿಸಿರುವ ಗ್ರಾಮಗಳನ್ನು ಕೋಷ್ಟಕ(5)ರಲ್ಲಿ ನಮೂದಾಗಿರುವ ತಾಲ್ಲೂಕು ಪಂಚಾಯಿತಿಯಾದ ಮಂಗಳೂರು ವ್ಯಾಪ್ತಿಯಿಂದ ಕೈಬಿಡಲಾಗಿದೆ.

| ಕ್ರಸಂ | ತಾಲ್ಲೂಕು ಪಂಚಾಯಿತಿ ಹೆಸರು | ತಾಲ್ಲೂಕು ಪಂಚಾಯಿತಿ ಕೇಂದ್ರಸ್ಥಾನ | ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳು | ಯಾವ ತಾಲ್ಲೂಕಿನಿಂದ ಈ ಗ್ರಾಮಗಳು ಹೊಸ ತಾಲ್ಲೂಕು ಪಂಚಾಯಿತಿಗೆ ಸೇರ್ಪಡೆಗೊಂಡಿದೆ. |
|---|---|---|---|---|
| (1) | (2) | (3) | (4) | (5) |
| 1. | ಮೂಡುಬಿದಿರೆ | ಮೂಡುಬಿದಿರೆ | ಪಡುಮರನಾಡು | ಮಂಗಳೂರು |
| 2. | | | ಮೂಡುಮರನಾಡು | |
| 3. | | | ದರೇಗುಡ್ಡೆ | |
| 4. | | | ಪಾಣಪಿಲ | |
| 5. | | | ಕೆಲ್ಲಾಪುತ್ತಿಗೆ | |
| 6. | | | ನೆಲ್ಲಿಕಾರು | |
| 7. | | | ಮಂತ್ರಾಡಿ | |
| 8. | | | ವಾಲಪಡಿ | |
| 9. | | | ಶಿರ್ತಾಡಿ | |
| 10. | | | ಪಡುಕೊಣಾಜೆ | |
| 11. | | | ಮೂಡುಕೊಣಾಜೆ | |

| | | | | |
|---|---|---|---|---|
| 12. | | | ಹೊಸಬೆಟ್ಟು | |
| 13. | | | ತೋಡಾರು | |
| 14. | | | ಇರುವೈಲು | |
| 15. | | | ಪುಚ್ಚಮೊಗ್ರು | ಮಂಗಳೂರು |
| 16. | | | ತೆಂಕಮಿಜಾರು | |
| 17. | | | ಬಡಾಮಿಜಾರು | |
| 18. | | | ನಿಡ್ಡೋಡಿ | |
| 19. | | | ಕಲ್ಲಮುಂಡ್ಕೂರು | |
| 20. | | | ಕದಂನ್‌ದಾಲೆ | |
| 21. | | | ಫಲಡ್ಕ | |
| 22. | | | ಬೆಳುವಾಯಿ | |
| 23. | | | ಪುತ್ತಿಗೆ | |
| 24. | | | ಪ್ರಾಂತ್ಯ | |
| 25. | | | ಮರ್ಪಡಿ | |
| 26. | | | ಕರಿಂಜೆ | |
| 27. | | | ಕಲ್ಲಾಬೆಟ್ಟು | |
| 28. | | | ಮರೂರು | |

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 119 ಮತ್ತು 120 ರಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರತಿಯೊಂದು ತಾಲ್ಲೂಕಿಗೆ ಕಾಲಂ 120ನ್ನು 302(ಎ)ರ ಜೊತೆ ಓದಿಕೊಂಡಂತೆ ತಾಲ್ಲೂಕು ಪಂಚಾಯಿತಿಯ ಸದಸ್ಯರ ಹುದ್ದೆಯ ಅವಧಿಯಲ್ಲಿ ಅಂತಹ ತಾಲ್ಲೂಕು ಪರಿಮಿತಿಗಳನ್ನು ಬದಲಾವಣೆ ಮಾಡಿ ಹೊಸ ತಾಲ್ಲೂಕನ್ನು ರಚಿಸಿ, ಅಂತಹ ರಚನೆಯಾದ ಹೊಸ ತಾಲ್ಲೂಕು ಪಂಚಾಯಿತಿಗೆ ಸೇರ್ಪಡೆಯಾದ ಪ್ರದೇಶದ ಪೂರ್ಣ ಅಥವಾ ಬಹುಭಾಗವು ಇರುವ ಚುನಾವಣಾ ಕ್ಷೇತ್ರಗಳನ್ನು ಪ್ರತಿನಿಧಿಸುವ ತಾಲ್ಲೂಕು ಪಂಚಾಯತ್ ಸದಸ್ಯರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 302(ಎ) ರೊಂದಿಗೆ ಓದಿಕೊಂಡಂತೆ ಪ್ರಕರಣ 133 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸಂಬಂಧಿಸಿದ ಪ್ರಾದೇಶಿಕ ಆಯುಕ್ತರು ಹೊಸದಾಗಿ ರಚನೆಯಾಗಿರುವ ತಾಲ್ಲೂಕು ಪಂಚಾಯಿತಿಗೆ ಮತ್ತು ಅಸ್ತಿತ್ವದಲ್ಲಿರುವ ತಾಲ್ಲೂಕು ಪಂಚಾಯಿತಿಗೆ ಸದಸ್ಯರನ್ನು ಅಧಿಸೂಚಿಸತಕ್ಕದ್ದು.

ಅಸ್ತಿತ್ವದಲ್ಲಿದ್ದ ತಾಲ್ಲೂಕು ಪಂಚಾಯಿತಿಯಲ್ಲಿ ನಿಹಿತವಾಗಿರುವ ಖರ್ಚು ಮಾಡದೇ ಉಳಿದ ನಿಧಿ ಮತ್ತು ಎಲ್ಲಾ ಇತರೆ ಸ್ವತ್ತುಗಳನ್ನು ಸಂಬಂಧಪಟ್ಟ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಶೇ.50ರಷ್ಟು ನಿಧಿಯನ್ನು ಪ್ರದೇಶದ ವಿಸ್ತೀರ್ಣದ ಆಧಾರದ ಮೇಲೆ ಮತ್ತು ಶೇ.50ರಷ್ಟು ನಿಧಿಯನ್ನು ಜನಸಂಖ್ಯೆ ಆಧಾರದ ಮೇಲೆ ವಿಭಜಿಸಿ ಆದೇಶಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ಎಸ್.ಮಹಾಲಕ್ಷ್ಮೀ**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 200